ಸಸ್ಯೋದ್ಯಾನಗಳು

585 (608) ಶ್ರೀ ರಾಜಶೇಖರ ಬಸವರಾಜ ಪಾಟೀಲ್ (ಹುಮ್ನಾಬಾದ್) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಸ್ಯೋದ್ಯಾನಗಳ ನಿರ್ಮಾಣ ಯೋಜನೆಯು ಜಿಲ್ಲೆಗೆ ಮಾತ್ರ ಸೀಮಿತವೋ; ಅಥವಾ ತಾಲ್ಲೂಕುಗಳಿಗೂ ನೀಡಲಾಗುವುದೇ;

ಆ) 3.12707 ಹೆಕ್ಟೇರ್ ಪ್ರದೇಶದಲ್ಲಿ ನೆಡುತೋಪು ಅಭಿವೃದ್ಧಿಯಲ್ಲಿ ಹುಮ್ನಾಬಾದ್ ವಿಧಾನಸಭಾ ಮತಕ್ಷೇತ್ರಕ್ಕೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗುವುದು;

ಇ) 2672.49 ಲಕ್ಷ ಸಸಿಗಳನ್ನು ನೆಡುವ ಮೂಲಕ ಅರಣ್ಯ ಕ್ಷೇತ್ರಕ್ಕೆ ಕಾಯಕಲ್ಪ ಮಾಡಲಾಗಿದ್ದು, ಹುಮ್ನಾಬಾದ್ ವಿಧಾನಸಭಾ ಮತಕ್ಷೇತ್ರಕ್ಕೆ ಎಷ್ಟು ಸಸಿಗಳನ್ನು ನೆಡಲಾಗಿದೆ; ಅದಕ್ಕೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು);

ಶ್ರೀ ಸಿ.ಪಿ. ಯೋಗೇಶ್ವರ (ಅರಣ್ಯ ಸಚಿವರು) :

ಅ) ಸಸ್ಯೋದ್ಯಾನಗಳ ನಿರ್ಮಾಣ ಯೋಜನೆಯು ಜಿಲ್ಲೆಗೆ ಒಂದು ಮಾತ್ರ ನಿರ್ಮಾಣ ಮಾಡಲು ಸೀಮಿತವಾಗಿದ್ದು, ಜಿಲ್ಲೆಯ ಯಾವುದಾದರೂ ಒಂದು ಸ್ಥಳದಲ್ಲಿ ಸಸ್ಯೋದ್ಯಾನಗಳ ನಿರ್ಮಾಣ ಮಾಡಲು ಅವಕಾಶವಿರುತ್ತದೆ.

ಆ) ಹುಮ್ನಾಬಾದ ವಿಧಾನ ಸಭಾ ಮತಕ್ಷೇತ್ರಕ್ಕೆ, ವಲಯ ಅರಣ್ಯಾಧಿಕಾರಿ, ಹುಮನಾಬಾದರವರಿಂದ ಲಭ್ಯವಾಗಿರುವ ಅರಣ್ಯ ಪ್ರದೇಶದ ಸ್ಥಳಾವಕಾಶದಂತೆ 222 ಹೆ. ಪ್ರದೇಶದಲ್ಲಿ ನೆಡುತೋಪು ಅಭಿವೃದ್ಧಿ ಮಾಡಲಾಗುವುದು. ಈ ಕಾಮಗಾರಿಗಳಿಗಾಗಿ ಪ್ರಸ್ತುತ ಸಾಲಿಗೆ ವಿವಿಧ ಯೋಜನೆಗಳಡಿ ರೂ.40.845 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಬೀದರ್ ಅರಣ್ಯ ವಿಭಾಗದ, ಹುಮ್ನಾಬಾದ್ ವಲಯದ, ಹುಮ್ನಾಬಾದ ಮತಕ್ಷೇತ್ರಕ್ಕೆ ಪ್ರಸ್ತುತ ಸಾಲಿನಲ್ಲಿ ರೂ.2.372 ಲಕ್ಷ ಸಸಿಗಳನ್ನು ನೆಡಲಾಗುವುದು. ಈ ಸಸಿಗಳು 2011–12ನೇ ಸಾಲಿನಲ್ಲಿ ಬೆಳೆಸಲಾಗಿರುತ್ತದೆ. ಈ ವರ್ಷಕ್ಕೆ ಕೇವಲ ನಿರ್ವಹಣಾ ವೆಚ್ಚ ರೂ.2.754 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

ಬೀದರ್ ಜಿಲ್ಲೆಗೆ ಸಂಬಂಧಿಸಿದಂತೆ 2012–13ನೇ ಸಾಲಿನ ನೆಡುತೋಪು ನಿರ್ಮಾಣದ ವಿವರ ಈ ಕೆಳಗಿನಂತೆ ಇರುತ್ತದೆ.

ಕ್ರ. ಸಂ.	ಕಾಮಗಾರಿಯ ವಿವರ	ಔರಾದ	ಬೀದರ್	ಭಾಲ್ಕಿ	ಬಸವ ಕಲ್ಯಾಣ	ಹುಮ್ನಾಬಾದ	ಒಟ್ಟು
1	ನೆಡುತೋಪು ನಿರ್ಮಾಣ (ಹೆ.ನಲ್ಲಿ)	93	341	56.5	297.5	1142	1903
2	ನೆಡುತೋಪು ನಿರ್ಮಾಣಕ್ಕೆ ನೆಡಬೇಕಾಗಿರುವ ಸಸಿಗಳು (ಲಕ್ಷಗಳಲ್ಲಿ)	1.138	3.036	0.673	3.344	11.407	19.598
3	ನೆಡುತೋಪು ನಿರ್ಮಾಣಕ್ಕೆ ಬಿಡುಗಡೆ ಮಾಡಲಾಗುವ ಅನುದಾನ (ರೂ.ಲಕ್ಷಗಳಲ್ಲಿ)	15.017	53.012	9.668	47.381	148.319	273.397

ಸಂಖ್ಯೆ: ಅಪಜೀ 55 ಎಫ್‌ಟಿಎಸ್ 2012.

ವಿಶ್ವ ಬಂಡವಾಳ ಸಮಾವೇಶ

609 (598) ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ನೀಲಗಿರಿ ತೋಪುಗಳನ್ನು ಬೆಳೆಸಲು ನಿಷೇಧವಿದ್ದರೂ ನೀಲಗಿರಿ ಗಿಡಗಳನ್ನು ಬೆಳೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ; ಕ್ರಮ ಕೈಗೊಳ್ಳದಿದ್ದಲ್ಲಿ, ಕಾರಣಗಳೇನು? (ವಿವರ ನೀಡುವುದು);

ಶ್ರೀ ಸಿ.ಪಿ. ಯೋಗೇಶ್ವರ (ಅರಣ್ಯ ಸಚಿವರು) :

ಅ) ರಾಜ್ಯದ ಮಲೆನಾಡು ಮತ್ತು ಅರೆ ಮಲೆನಾಡು ಪ್ರದೇಶಗಳಲ್ಲಿ ಮಾತ್ರ ನೀಲಗಿರಿ ಬೆಳೆಸುವುದನ್ನು ನಿಷೇಧಿಸಿ ದಿನಾಂಕ: 19–03–2011 ರಂದು ಸರ್ಕಾರವು ಸುತ್ತೋಲೆ ಹೊರಡಿಸಿದೆ. ನಂತರದ ಅವಧಿಯಲ್ಲಿ ಮಲೆನಾಡು ಮತ್ತು ಅರೆ ಮಲೆನಾಡು ಪ್ರದೇಶಗಳಲ್ಲಿ ನೀಲಗಿರಿ ಬೆಳೆಸಿದ ಪ್ರಕರಣಗಳು ಗಮನಕ್ಕೆ ಬಂದಿರುವುದಿಲ್ಲ.